**ಒ.ಎಸ್.ನಂ. 333/22**
**ಪಿ. ಡಬ್ಲೂ-1**

**ದಿನಾಂಕಃ 03.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದಃ-**

ನಮ್ಮ ಜಮೀನಿಗೂ ಮತ್ತು ಪ್ರತಿವಾದಿಗಳ ಜಮೀನಿನ ಮಧ್ಯೆ ನೀರು ಹರಿಯುವ ಕಾಲುವೆ ಇದೆ ಎಂದರೆ ಸರಿಯಲ್ಲ. ಆ ರೀತಿ ಕಾಲುವೆ ಇರುವುದರಿಂದ ನಮ್ಮ ಜಮೀನನ್ನು ಪ್ರತಿವಾದಿಗಳು ಒತ್ತುವರಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ 26 ರಲ್ಲಿ ಮಾತ್ರ ನಮ್ಮ ಜಮೀನು ಭೂ ಸ್ವಾಧೀನ ಆಗಿದ್ದು, ಸರ್ವೇ ನಂ 19 ರಲ್ಲಿ ಭೂ ಸ್ವಾಧೀನ ಆಗಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ 19 ರಲ್ಲಿ ಭೂ ಸ್ವಾಧೀನ ಆಗಿಲ್ಲದಿದ್ದರೂ 1 ಎಕರೆ 10 ಗುಂಟೆ ಭೂ ಸ್ವಾಧೀನ ಆಗಿದೆ ಎಂದು ಪರಿಹಾರ ಹಣ ತೆಗೆದುಕೊಂಡಿದ್ದೇವೆ ಎಂದರೆ ಸರಿ. 2 ಎಕರೆ 10 ಗುಂಟೆ ಭೂ ಸ್ವಾಧೀನ ಆಗಿದ್ದರು ಅದೇ ಜಮೀನಿಗೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 5 ಎಕರೆ 20 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದು ಪುನಃ 2 ಎಕರೆ 20 ಗುಂಟೆ ಗೆ ಸಾಗುವಳಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅಲ್ಲಿ ಜಮೀನು ಇಲ್ಲದೇ ಇದ್ದರೂ 2 ಎಕರೆ 20 ಗುಂಟೆಗೆ ಸಾಗುವಳಿ ಪಡೆದು ಅಕ್ಕ ಪಕ್ಕದವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ಮರದಿಂದ ಕೆಳಗಡೆ ಇರುವ ಜಮೀನು ನಮ್ಮ ಜಮೀನು, ಮೇಲುಗಡೆ ಇರುವ ಜಮೀನು ಪ್ರತಿವಾದಿ ಜಮೀನು ಎಂದು ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ನಮ್ಮ ಮತ್ತು ಪ್ರತಿವಾದಿ ಜಮೀನಿನ ಮಧ್ಯ ಕಾಲುವೆ ಕಾಣುತ್ತಿದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ಮಧ್ಯೆ ಕಾಲುವೆ ಇದೆ ಎಂದು ಗುರುತಿಸಲು ನ್ಯಾಯಾಲಯದ ಮೂಲಕ ನಿಯೋಗಿಯನ್ನು ನೇಮಿಸಲು ನನ್ನದೇನು ಅಭ್ಯಂತರ ಇಲ್ಲ. ಪ್ರತಿವಾದಿ 28 ಗುಂಟೆ ಜಮೀನಿಗೆ ಸಾಗುವಳಿ ಪಡೆಯುತ್ತಿರುವ ಜಮೀನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ..ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**